# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ ವಲಯ, ವಾರ್ಡ್ ನಂ 13, ದೊಡ್ಡಬೊಮ್ಮಸಂದ್ರ

**ದಿನಾಂಕ:17-09-2022 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ13 ರಲ್ಲಿ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.**

| ಕ್ರಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ ಕಿರಣ್ ಬಿ | ನೋಡೆಲ್ ಅಧಿಕಾರಿ ಹಾಗೂ<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಯಲಹಂಕ (ಯೋಜನೆ), ಬಿ.ಬಿ.ಎಂ.ಪಿ |
| 2 | ಶ್ರೀ ಮೇಘನಾ ಎಂ | ಸಹಾಯಕ ಅಭಿಯಂತರರು<br>ವಾರ್ಡ್ ನಂ 10 |
| 3 | ಡಾ॥ ಶೋಭ ನಾಗೇಶ | ಆರೋಗ್ಯ ವೈದ್ಯಾಧಿಕಾರಿ<br>ತಿಂಡ್ಲು, ಪ್ರಾಥಮಿಕ ಆರೋಗ್ಯ ಕೇಂದ್ರ |
| 4 | ಶ್ರೀ ಮುಜಾಯಿದ್ ಬಾಷ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5 | ಶ್ರೀ ಜೆ ಮಲ್ಯಾದ್ರಿ | ತೋಟಗಾರಿಕಾ ಪರಿವೀಕ್ಷಕರು |
| 6 | ಶ್ರೀ ವಿ.ಆರ್ ಪ್ರವೀಣ್ ಕುಮಾರ್ | ಹಿರಿಯ ಆರೋಗ್ಯ ಪರಿವಿಕ್ಷಕರು<br>ದೊಡ್ಡಬೊಮ್ಮಸಂದ್ರ, ವಾರ್ಡ್ ನಂ 13 |
| 7 | ಶ್ರೀ ಎ, ನಾಗಪ್ಪ | ತೆರಿಗೆ ಪರಿವೀಕ್ಷಕರು |
| 8 | ಶ್ರೀಮತಿ ಸೋನಿಯಾ ಆರ್ | ಕಿರಿಯ ಆರೋಗ್ಯ ಪರಿವಿಕ್ಷಕರು |
| 9 | ಶ್ರೀ ವಿಜಯ್‌ಕುಮಾರ್ | ಮೇಲ್ವಿಚಾರಕರು |
| 10 | ಶ್ರೀ ಮೋಹನಾಚಾರಿ ಎನ್ | ವಾರ್ಡ್ ಮಾರ್ಷಲ್ |
| 11 | ಶ್ರೀ ನವೀನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 12 | ಶ್ರೀ ನಾರಾಯಣ ಸ್ವಾಮಿ ಜಿ | ಗ್ಯಾಂಗ್‌ಮೆನ್ |
| 13 | ಶ್ರೀ ಬಿ.ಕೆ ಸುರೇಶ | ಪೌರಕಾರ್ಮಿಕ |
| 14 | ಶ್ರೀ ಆದಪ್ಪ ಎ | ಗ್ಯಾಂಗ್‌ಮೆನ್ |
| 15 | ಶ್ರೀ ಬಿ.ಎಸ್ ಗೋಪಾಲಕೃಷ್ಣ | ಅಧ್ಯಕ್ಷರು, ಬಿಸಿಸಿಐ |
| 16 | ಶ್ರೀಮತಿ ಬೇಬಿ ರಾಣಿ | ಸಾರ್ವಜನಿಕರು |
| 17 | ಶ್ರೀ ಶ್ರೀನಿವಾಸು | ಸಾರ್ವಜನಿಕರು |
| 18 | ಶ್ರೀ ಎಂ.ಈ ಪಿಳ್ಳಪ್ಪ | ಸಾರ್ವಜನಿಕರು |
| 19 | ಶ್ರೀ ಚೇತನ್ ಬಿ | ಸಾರ್ವಜನಿಕರು |

Scanned by CamScanner

ದಿನಾಂಕ:17-09-2022 ರಂದು ಬೆಳಿಗ್ಗೆ 11.00 ಗಂಟೆಗೆ ದೊಡ್ಡಬೊಮ್ಮಸಂದ್ರ ವಾರ್ಡ್ ಸಂ:13ರ ಕಛೇರಿಯಲ್ಲಿ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರತಿನಿಧಿಗಳೊಂದಿಗೆ ನಡೆಸಿದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | ದೊಡ್ಡಬೊಮ್ಮಸಂದ್ರ ಕೆರೆ ಆವರಣದಲ್ಲಿ ಹೋಂ ಗಾರ್ಡ್‌ಗಳು ಪೂರ್ಣ ಪ್ರಮಾಣದಲ್ಲಿ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುವುದಿಲ್ಲ | ಕೆರೆಗಳ ಅಭಿವೃದ್ಧಿ ಇಲಾಖೆಯವರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಕೆರೆಗಳ ಇಲಾಖೆ ಬಿ.ಬಿ.ಎಂ.ಪಿ, ಯಲಹಂಕ |
| 2 | ತಿಂಡ್ಲು ಮುಖ್ಯ ರಸ್ತೆಯ ಬದಿಯಲ್ಲಿ ಗ್ಯಾರೇಜ್ ಮುಂಭಾಗ ಹಳೆಯ ವಾಹನಗಳನ್ನು ತೆರವುಗೊಳಿಸಬೇಕೆಂದು ಕೋರಲಾಯಿತು. | ಯಲಹಂಕ ಸಂಚಾರಿ ಪೊಲೀಸ್ ಸಿಬ್ಬಂದಿಯವರ ಸಹಯೋಗದೊಂದಿಗೆ ವಾರ್ಡಿನ ಅಭಿಯಂತರರು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಯಲಹಂಕ ಸಂಚಾರಿ ಪೊಲೀಸ್ ಸಿಬ್ಬಂದಿ ಮತ್ತು ವಾರ್ಡ್ ಅಭಿಯಂತರರು |
| 3 | ರಾಮಚಂದ್ರಪುರ ಮುಖ್ಯ ರಸ್ತೆಯ ಮಧ್ಯದ ಅಂಗಡಿಯಿಂದ ಸಾರ್ವಜನಿಕರಿಗೆ ಹಲವು ರೀತಿಯ ತೊಂದರೆಗಳು ಉದ್ಭವಿಸುತ್ತಿದ್ದು, ಸಾರ್ವಜನಿಕರು ಇದರ ಬಗ್ಗೆ ಕ್ರಮ ಕೈಗೊಳ್ಳಲು ದೂರು ನೀಡಿರುತ್ತಾರೆ. | ಸದರಿ ಪ್ರದೇಶದಲ್ಲಿ ಸಾರ್ವಜನಿಕರು ಹಾಗೂ ವಾರ್ಡ್ ಅಭಿಯಂತರರು, ವಿದ್ಯಾರಣ್ಯಪುರ ಪೊಲೀಸ್ ಸಿಬ್ಬಂದಿ ರವರ ಸಹಯೋಗದೊಂದಿಗೆ ಜಂಟಿ ಕಾರ್ಯಚರಣೆ ನಡೆಸಿ ತೊಂದರೆಯನ್ನು ನಿವಾರಿಸುವುದು. | ಯಲಹಂಕ ಪೊಲೀಸ್ ಸಿಬ್ಬಂದಿ, ವಾರ್ಡ್ ಅಭಿಯಂತರರು ಮತ್ತು ಸಾರ್ವಜನಿಕರ |
| 4 | ದೊಡ್ಡಬೊಮ್ಮಸಂದ್ರ ವಾರ್ಡ್ ನಂ:13ರಲ್ಲಿನ ಹಲವು ಪ್ರದೇಶಗಳಲ್ಲಿ ಮರದ ಕೊಂಬೆಗಳು ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಪಾದಚಾರಿಗಳಿಗೆ ಮತ್ತು ವಿದ್ಯುತ್ ತಂತಿಗಳಿಗೆ ಆಡಚಣೆ ಉಂಟಾಗುವ ಬಗ್ಗೆ ದೂರು ನೀಡಿರುತ್ತಾರೆ. | ಬಿಬಿಎಂಪಿಯ ಆರಣ್ಯ ಇಲಾಖೆ ರವರಿಗೆ ತಮ್ಮ ಪರಿಮಿತಿಯಲ್ಲಿ ತೆರವುಗೊಳಿಸಬಹುದಾದ ಮರದ ಕೊಂಬೆಗಳನ್ನು ಕಟಾವು ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಹಾಗೂ ಅತಿ ಎತ್ತರವಿರುವ ಮರಗಳ ಕೊಂಬೆಗಳನ್ನು ಕಟಾವು ಮಾಡಲು ಕ್ರೇನ್ ಅವಶ್ಯಕತೆ ಇರುವುದರಿಂದ, ಕ್ರೇನ್ ಅನುಮತಿ ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು | ಆರಣ್ಯ ಇಲಾಖೆ, ಬಿಬಿಎಂಪಿ, ಯಲಹಂಕ ವಲಯ |
| 5 | ಮತದಾರರ ಗುರುತಿನ ಚೀಟಿ ಪಟ್ಟಿಯಲ್ಲಿ ಹಲವು ನ್ಯೂನತೆಗಳು ಕಂಡುಬಂದಿದ್ದು ತಿದ್ದುಪಡಿ ಮಾಡಲು ಸಾರ್ವಜನಿಕರು ಕೋರಿರುತ್ತಾರೆ. | ಕಂದಾಯ ನಿರೀಕ್ಷಕರಿಗೆ ಸದರಿ ವಿಷಯದ ಬಗ್ಗೆ BLO ರವರಿಗೆ ತಳ ಮಟ್ಟದಲ್ಲಿ ನ್ಯೂನತೆಗಳನ್ನು ಪರಿಶೀಲಿಸಿ ಸರಿಪಡಿಸಲು ಕಂದಾಯ ಇಲಾಖೆಯವರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. | ಕಂದಾಯ ಇಲಾಖೆ, ವಿದ್ಯಾರಣ್ಯಪುರ ಉಪ ವಿಭಾಗ, ಬಿಬಿಎಂಪಿ |
| 6 | ಸೊಳ್ಳೆಗಳಿಂದ ಡೆಂಗ್ಯೂ ಜ್ವರವು ಹೆಚ್ಚಾಗಿ ಹರಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿರುತ್ತದೆ ಮತ್ತು ಸೊಳ್ಳೆಗಳನ್ನು ನಿಯಂತ್ರಿಸುವ ಬಗ್ಗೆ ಕೋರಿರುತ್ತಾರೆ. | ಸಾರ್ವಜನಿಕರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಸೊಳ್ಳೆಗಳ ಉತ್ಪಾದನೆಯನ್ನು ತಡೆಗಟ್ಟುವ ಬಗ್ಗೆ ಹಲವಾರು ಸಲಹೆಗಳನ್ನು ಸಮಿತಿ ಸಭೆಯಲ್ಲಿ ನೀಡಿರುತ್ತಾರೆ | ಆರೋಗ್ಯ ಇಲಾಖೆ |

Scanned by CamScanner

| | | | |
|---|---|---|---|
| 7 | ದೊಡ್ಡಬೊಮ್ಮಸಂದ್ರ ಕೆರೆಯಲ್ಲಿ ಹೂಳು ತೆಗೆಯುವ ಬಗ್ಗೆ ಸಾರ್ವಜನಿಕರು ಕೋರಿರುತ್ತಾರೆ. | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಕೆರೆಗಳ ವಿಭಾಗದ ಸ.ಕಾ.ಪಾ.ಅ ರವರೊಂದಿಗೆ ಚರ್ಚಿಸಲಾಗಿದ್ದು, ಅತಿ ಶೀಘ್ರದಲ್ಲಿ ಕೆರೆಯ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸೂಚಿಸಿರುತ್ತಾರೆ. | ಸ.ಕಾ.ಪಾ.ಅ, ಕೆರೆಗಳ ವಿಭಾಗ, ಬಿಬಿಎಂಪಿ |
| 8 | ದೊಡ್ಡಬೊಮ್ಮಸಂದ್ರ ವಾರ್ಡಿನ ಟೆಲಿಕಾಂ ಲೇಔಟ್, 3ನೇ ಅಡ್ಡ ರಸ್ತೆ ಮತ್ತು ಸುತ್ತ ಮುತ್ತಲಿನ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ದೂರನ್ನು ನೀಡಿರುತ್ತಾರೆ. | ವಾರ್ಡಿನ ಅಭಿಯಂತರರಿಗೆ ಸದರಿ ಪ್ರದೇಶವನ್ನು ಪರಿಶೀಲಿಸಿ ರಸ್ತೆ ಗುಂಡಿಗಳನ್ನು ಮುಚ್ಚಲು ವಾರ್ಡಿನ ನಿರ್ವಹಣೆ ಅನುದಾನದಡಿಯಲ್ಲಿ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು | ಸಹಾಯಕ ಅಭಿಯಂತರರು, ವಾರ್ಡ್ ನಂ:13 |

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ:13
ದೊಡ್ಡಬೊಮ್ಮಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ,
ವಾರ್ಡ್ ನಂ:13
ದೊಡ್ಡಬೊಮ್ಮಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1) ಮಾನ್ಯ ಜಂಟಿ ಆಯುಕ್ತರು ಬಿ.ಬಿ.ಎಂ.ಪಿ, ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ನೋಡಲ್ ಅಧಿಕಾರಿ, ವಾರ್ಡ್ ನಂ:13, ದೊಡ್ಡಬೊಮ್ಮಸಂದ್ರ, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ / ಯೋಜನಾ ವಿಭಾಗ / ರಸ್ತೆ ಮೂಲಭೂತ ಸೌಕರ್ಯ / ಕೆರೆ ಅಭಿವೃದ್ಧಿ / ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯನೀ.ಗಾ. ವಿಭಾಗ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಕೋಶ, ಬ್ಯಾಟರಾಯನಪುರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ / ಬಿ.ಡಬ್ಲ್ಯು.ಎಸ್.ಎಸ್.ಬಿ ವಿದ್ಯಾರಣ್ಯಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮಕ್ಕಾಗಿ.
8) ಪಶುಪಾಲನಾ ವಿಭಾಗ, ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9) ಕಛೇರಿ ಕಡತಕ್ಕೆ.

Scanned by CamScanner